Forcible Collection of funds for laying Foundation Stone for D. C. C. Bank Building at Raichur

529. Sri M. NAGAPPA (Raichur).—

Will the Minister for Development be pleased to state:—

(*a*) whether the Chief Minister has laid the foundation stone for building of the District Co-operative Central Bank, Raichur on 23rd December 1968;

(*b*) if so, the amount spent by the District Co-operative Central Bank, Raichur for the said function;

(*c*) whether all the Co-operative Societies in Raichur District were forced to contribute Rs. 100 and Rs. 50 by the District Co-operative Central Bank, Raichur;

(*d*) the action taken by them to stop such forcible contribution from the societies;

(*e*) whether they are aware that on previous occasion such a function has been arranged and the foundation stone was laid by anothere Minister;

(*f*) if so, whether there is a proposal to fix the responsibility on the Directors for unnecessary expenditure incurred?

Sri P. M. NADGOUDA (Minister for Development).—

(*a*) Yes.

(*b*) Rs, 3,985-88.

(*c*) No.

(*d*) Does not arise.

(*e*) No.

(*f*) Does not arise.

ಶ್ರೀ ಎಂ. ನಾಗಪ್ಪ.—ಸ್ವಾಮಿ, ನಮ್ಮ ಮುಖ್ಯ ಮಂತ್ರಿಗಳು ರಾಯಚೂರಿನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಕಟ್ಟಡದ ಅಸ್ತಿಭಾರವನ್ನು ಹಾಕುವುದಕ್ಕಿಂತ ಮುಂಚೆ ಅಲ್ಲಿ ಬೇರೆ ಮಂತ್ರಿಗಳು ಅಸ್ತಿಭಾರವನ್ನು ಹಾಕಿಲ್ಲ ಎಂದು ಹೇಳಿದ್ದೀರಿ, ಆದರೆ ರಾಯಚೂರು ಜಿಲ್ಲೆ ಹೈದರಾಬಾದ್ ಪ್ರಾಂತ್ಯದಲ್ಲಿರುವಾಗ ದೇವಿಸಿಂಗ್ ಚವಾನ್ ಎನ್ನುವರ ಹಸ್ತದಿಂದ ಫೌಂಡೇಷನ್ ಸ್ಟೋನ್ ಹಾಕಿದ್ದಾರೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ನಾನು ತರುತ್ತೇನೆ. ಇದಕ್ಕೆ ರೆಕಾರ್ಡು ಇರುವುದಿಲ್ಲ. ಅಸಿಸ್ಟೆಂಟ್ ರಿಜಸ್ಟ್ರಾರರ ಆಫೀಸಿನಲ್ಲಿ ಒಂದು ಫೋಟೋ ಇದೆ. ಅವರಲ್ಲಿ ಫೌಂಡೇಷನ್ ಸ್ಟೋನು ಇದೆ. ಅದರ ಪಕ್ಕದಲ್ಲಿ ಅಧಿಕಾರಿಗಳು ಇದ್ದಾರೆ. ಆದ್ದರಿಂದ ಆ ಬ್ಯಾಂಕಿನ ಫೌಂಡೇಷನ್ ಸ್ಟೋನ್ ಹಾಕಿದೆ ಎನ್ನುತಕ್ಕಂಥಾದ್ದನ್ನು ತಮ್ಮ ಗಮನಕ್ಕೆ ತಂದರೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ?

ಶ್ರೀ ಪಿ. ಎಂ. ನಾಡಗೌಡ.—ಈಗ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅಂಥಾ ಮಾಹಿತಿ ಸರ್ಕಾರಕ್ಕೆ ಗೊತ್ತಿಲ್ಲ.

Sri B. P. GANGADHAR.—Nearly Rs. 4,000 has been spent for laying the foundation-stone. Don't you think that by spending so much money extravagantly, the moneys of the share-holders, and if Government has investsd money by means of shares, all this is unnecessrily wasted ?

ಶ್ರೀ ಪಿ. ಎಂ. ನಾಡಗೌಡ.—ಈ ಒಂದು ಸಹಕಾರಿ ಬ್ಯಾಂಕ್ ಏನಿದೆ ಇದರಲ್ಲಿ ಎರಡೂವರೆ ಕೋಟಿ ರೂಪಾಯಿಗಳ ವ್ಯವಹಾರ ಮಾಡುತ್ತಿದ್ದಾರೆ. ಇದು ಒಂದು ಅಭೂತಪೂರ್ವ ಅವಕಾಶ. ಫೌಂಡೇಷನ್ ಸ್ಟೋನ್ ಹಾಕುವಂತಹ ಕೆಲಸಕ್ಕೆ 4 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದು ಹೆಚ್ಚೇನೂ ಅಲ್ಲ. ಎಷ್ಟೋ ಬ್ಯಾಂಕುಗಳು ಇಂಥಾ ಒಂದು ಸಮಾರಂಭಕ್ಕೆ 25 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—ಸ್ಯಾವಿ ಸೆಂಟ್ರರ್ ಬ್ಯಾಂಕಿನಲ್ಲಿ ಖರ್ಚು ಆದಂಥಾದ್ದನ್ನು ಇಲ್ಲಿ ಕೊಟ್ಟಿದ್ದೀರಾ ಅಥವಾ ಎರ್ರಾ ಸಣ್ಣ ಸಣ್ಣ ಬ್ಯಾಂಕುಗಳಿಂದ ಬಂದಂಥ ಕಾಂಟ್ರಿಬ್ಯೂಷನ್ ಸಹಿತ ಲೆಕ್ಕಕ್ಕೆ ತೆಗೆದುಕೊಂಡು ಖರ್ಚನ್ನು ಕೊಟ್ಟಿದ್ದೀರಾ, ಕಾಂಟ್ರಿಬ್ಯೂಷನ್ ಬಂದದ್ದು ಎಷ್ಟು ?

ಶ್ರೀ ಪಿ. ಎಂ. ನಾಡಗೌಡ,—ಈಗ 3,985-88 ರೂಪಾಯಿಗಳನ್ನೇನು ಖರ್ಚು ಮಾಡಿದ್ದಾರೆ ಅದನ್ನು ಪೂರ್ತಿ ಸೆಂಟ್ರರ್ ಬ್ಯಾಂಕಿನ ಫೌಂಡೇಷನ್ ಸ್ಟೋನ್ಸ್ ಹಾಕುವ ಸಲುವಾಗಿ ಅದರ ಫಂಡಿನಿಂದ ಖರ್ಚು ಮಾಡಿದ್ದಾರೆ. ಅಲ್ಲಿ ಎರಡು ಸಮಾರಂಭಗಳು ನಡೆದಿವೆ. ಒಂದು ಜಿರ್ಲಾ ಸಹಕಾರಿ ಬ್ಯಾಂಕಿನ ಕಟ್ಟಡದ ಅಸ್ತಿಭಾರವನ್ನು ಹಾಕುವುದು, ಇದಕ್ಕೆ 3,985-88 ರೂಪಾಯಿಗಳು ಖರ್ಚಾಗಿದೆ. ಇನ್ನೊಂದು ಫೀಲ್ಡ್ ವರ್ಕರ್ಸ್ ಕಾನ್‌ಫರೆನ್ಸ್, ಇದಕ್ಕೆ ಪ್ರೈಮರಿ ಸೊಸೈಟಿಗಳಿಂದ 10,770-00 ರೂಪಾಯಿಗಳನ್ನು ಕೂಡಿಸಿತ್ತು. ಈ ಕಾನ್‌ಫರೆನ್ಸಿಗೆ 6,081-82 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ವರದಿಯಲ್ಲಿ ಇದೆ.

ಶ್ರೀ ಎಂ. ನಾಗಪ್ಪ.—ಈ ಪ್ರೈಮರಿ ಬ್ಯಾಂಕಿನ ವರ್ಕರ್ಸ್ ಕಾನ್‌ಫರೆನ್ಸ್ ಸಭೆ ಪ್ರತಿವರ್ಷ ನಡೆಯುತ್ತದೆ. ರಾಯಚೂರಿನ ಇತಿಹಾಸದಲ್ಲೇ 2 ಸಾವಿರ ರೂಪಾಯಿಗಳಿಗಿಂತ ಹೆಚ್ಚಿಗೆ ಆ ಕಾನ್‌ಫರೆನ್ಸಿಗೆ ಖರ್ಚು ಮಾಡಿಲ್ಲ. ಅದಕ್ಕೆ 10 ಸಾವಿರ ರೂಪಾಯಿಗಳನ್ನು ಕಲೆಕ್ಷನ್ ಮಾಡುವುದಕ್ಕೆ ಕಾರಣವೇನು ?

ಶ್ರೀ ಪಿ. ಎಂ. ನಾಡಗೌಡ.—ಕಾರಣ ಏನು ಎಂಬುದು ಗೊತ್ತಾಗುವುದಿಲ್ಲ. ಈ ವ್ಯವಹಾರ ಮಧ್ಯವರ್ತಿ ಬ್ಯಾಂಕುಗಳ ವ್ಯವಹಾರ. ಈ ಸಹಕಾರಿ ಸಂಸ್ಥೆಗಳು ಹೆಚ್ಚು ಖರ್ಚುಮಾಡಿ ಪ್ರಪಗ್ಯಾಂಡಾ ಮಾಡುವುದು ಅವಶ್ಯ ಇದೆ ಎಂದು ರಿಸರ್ವ್ ಬ್ಯಾಂಕಿನವರೇ ಹೇಳುತ್ತಾರೆ. ಇದು ರಿಜರ್ವ್ ಬ್ಯಾಂಕಿನ ಸ್ಪ್ಯಾಚ್ಯೂಟರಿ ಕನ್‌ವೆನ್‌ಷನ್ ಇದೆ.

Sri G. CHANDRAKANTH.—With reference to answer (c), may I know whether they have not induced the societies to pay Rs. 150 ?

ಶ್ರೀ ಪಿ. ಎಂ. ನಾಡಗೌಡ.—ಫೋರ್ಸ್ ಮಾಡಿಲ್ಲ. ಎಲ್ಲರೂ ಕೂಡಿ ತೀರ್ಮಾನ ಮಾಡಿದ ಪ್ರಕಾರ ಕೊಟ್ಟಿದ್ದಾರೆ. ಈ ಕೆಲಸದೊಳಗೆ ಸರ್ಕಾರದ ಸಂಬಂಧವಿಲ್ಲ. ಸೆಂಟ್ರರ್ ಬ್ಯಾಂಕ್‌ನ ಸದಸ್ಯರುಗಳು ತೀರ್ಮಾನ ಮಾಡಿದ್ದಾರೆ. ಇದರೊಳಗೆ ಫೋರ್ಸ್ ಬರುವುದಿಲ್ಲ.

Sri J. P. SARWESH.—If it is proved that Sri Devi Sen, Ex. Hyderabad Minister also laid the foundation to this building to which recently our Chief Minister laid the foundation, will you allow the true stone to exist over the building ?

Sri P. M. NADGOUDA.—It is a hypothetical question. As far as the Government is concerned, there is no information at all about that fact.

Sri D. B. KALMANKAR.—May I know whether the old records of old Hyderabad Government are not available with the Government ?

Sri P. M. NADGOUDA.—I am not aware which records are available.

ಶ್ರೀ ಎಸ್. ಎಂ. ಗುರಡ್ಡಿ.—ರಾಯಚೂರು ಕೋಆಪರೇಟಿವ್ ಬ್ಯಾಂಕ್‌ನವರು ಮೊದಲು ಮೈನ್ ಬಿಲ್ಡಿಂಗ್‌ಗಾಗಿ ಅಡಿಗಲ್ಲಿನ ಸಮಾರಂಭ ಏರ್ಪಡಿಸಿದ್ದರು, ಈಗ ಅಡ್ಮಿನಿಸ್ಟ್ರೇಟಿವ್ ಬಿಲ್ಡಿಂಗ್‌ನ ನಲುವಾಗಿ ರಾಯಚೂರಿನ ಜಿರ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಕಟ್ಟಡದ ಅಸ್ತಿಭಾರವನ್ನು ಹಾಕಿರಬಹುದು ಅಲ್ಲವೆ ?

ಶ್ರೀ ಪಿ. ಎಂ. ನಾಡಗೌಡ.—ಇರಬಹುದು.

Sri V. N. PATIL.—In view of the discussion during this question, does the Government think it necessary to do away with this inaugural function which is a criminal and national waste of funds ?

Sri P. M. NADGOUDA.—The Government is not prepared to accept the opinion. It is the opinion of the hon. Member.

ಶ್ರೀ ಎಂ. ನಾಗಪ್ಪ.—ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ 100ಕ್ಕೆ 50ರಷ್ಟು ಕೋಆಪರೇಟಿವ್ ಸೊಸೈಟಿಗಳು ಲಿಕ್ವಿಡೇಟ್ ಆಗುವ ಸ್ಥಿತಿಗೆ ಬಂದಿವೆ. ಇಂತಹ ಸೊಸೈಟಿಗಳಿಂದ ಬಲಾತ್ಕಾರವಾಗಿ ಹಣ ವಸೂಲು ಮಾಡುತ್ತಿರುವುದರಿಂದ ಲಿಕ್ವಿಡೇಟ್ ಆಗುವ ಸ್ಥಿತಿಗೆ ಬಂದಿರುವುದರಿಂದ, ಈಗ ವಸೂಲ ಮಾಡಿರುವ ಹಣವನ್ನು ವಾಪಸ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಲಿಕ್ವಿಡೇಟ್ ಆಗುವ ಪರಿಸ್ಥಿತಿಗೆ ಬಂದಿರುವಂತಹ ಸೊಸೈಟಿಗಳಿಗೆ ಉತ್ತೇಜನ ಕೊಡಬೇಕಾದರೆ ಇಂತಹ ಸಮಾರಂಭಗಳು ನಡೆಯಬೇಕಾಗುತ್ತದೆ. ಆದಕಾರಣ ಕಾಂಟ್ರಿಬ್ಯೂಷನ್ ಹಣವನ್ನು ವಾಪಸ್ ಕೊಡುವುದಕ್ಕಾಗುವುದಿಲ್ಲ.

Damage to crops by wild elephants in Alur Taluk

543. Sri K. P. CHIKKEGOWDA (Sakleshpur).—

Will the Minister of State for Forests be pleased to state :—

(*a*) whether it is a fact that much damage is being caused to the standing crops in Kundur, Kenchammana Hoskote Hoblies of Alur (Hassan) taluk by wild elephants from the last five to ten years ;

(*b*) the action taken by the Government to prevent such damages ?

Sri ALUR HANUMANTHAPPA (Minister of State for Forests).—

(*a*) No.

(*b*) During 1966-67 game staff from Chickmagalur and Mysore have attended to the scaring of wild elephants with local staff.

ಶ್ರೀ ಕೆ. ಪಿ. ಚಿಕ್ಕೇಗೌಡ.—(ಅ) ಪ್ರಶ್ನೆಗೆ ಉತ್ತರವಾಗಿ ನಿಜವಲ್ಲ ಎಂದು ಉತ್ತರ ಕೊಟ್ಟಿರುವುದು ನೋಡಿ ನನಗೆ ಆಶ್ಚರ್ಯವಾಗಿದೆ. ಲಕ್ಷಾಂತರ ರೂಪಾಯಿಗಳ ಬೆಳೆ ಅನೆಗಳ ಹಾವಳಿಯಿಂದ ನಷ್ಟವಾಗಿಲ್ಲವೇ ಎಂದು ಕೇಳಿದ್ದಕ್ಕೆ ನಿಜವಲ್ಲವೆಂದು ಹೇಳಿದ್ದೀರಿ. ಇನ್ನು ಎಷ್ಟು ಲಕ್ಷ ರೂಪಾಯಿಗಳ ಬೆಳೆ ನಷ್ಟವಾದ ಮೇರೆ ಒಪ್ಪಿಕೊಳ್ಳುತ್ತೀರಾ ?

†ಶ್ರೀ ಆಲೂರು ಹನುಮಂತಪ್ಪ.—1966ನೇ ಇಸವಿಯಿಂದ ಅನೆಗಳಿಂದ ನಷ್ಟವಾಗುತ್ತಿರುವುದು ವರದಿಯಾಗಿದೆ. 5-10 ವರ್ಷಗಳಿಂದ ನಷ್ಟವಾಗುತ್ತಿದೆ ಎಂಬ ವರದಿ ನನ್ನ ಹತ್ತಿರ ಇಲ್ಲ.

ಶ್ರೀ ಕೆ. ಪಿ. ಚಿಕ್ಕೇಗೌಡ.—1948ನೇ ಇಸವಿಯಿಂದ 4 ಜನ ನತ್ತಿರುವುದು ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆ ವಿಷಯ ಗೊತ್ತಿಲ್ಲ.